ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1372(1618)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಪಿ. ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ರಾಜ್ಯದ ಸರ್ಕಾರಿ ಇಲಾಖೆಗಳಡಿಯಲ್ಲಿರುವ ಜ್ಯೇಷ್ಠತಾ ಪಟ್ಟಿಯಲ್ಲಿರುವ ಗೊಂದಲದ ಕುರಿತು

(ಅ) ರಾಜ್ಯದ ಸರ್ಕಾರಿ ಇಲಾಖೆಗಳಲ್ಲಿ ಇರುವ ಜ್ಯೇಷ್ಠತಾ ಪಟ್ಟಿಯಲ್ಲಿರುವ ಗೊಂದಲಗಳ ನಿವಾರಣೆಗೆ ಸಿ.ಆ.ಸು. ಇಲಾಖೆಯಿಂದ ಕಾನೂನಾತ್ಮಕ ಆದೇಶಗಳನ್ನು ನೀಡಬಹುದೇ; (ವಿವರ ನೀಡುವುದು)

(ಆ) ಕೆಲವು ಇಲಾಖೆಗಳಲ್ಲಿ ಜ್ಯೇಷ್ಠತಾ ಪಟ್ಟಿಯಲ್ಲಿರುವ ಗೊಂದಲಗಳು ನ್ಯಾಯಾಲಯದ ಮೆಟ್ಟಿಲೇರಿರುವ ಪ್ರಕರಣಗಳಲ್ಲಿರುವ ಇಲಾಖೆಯಲ್ಲಿ ಅಗತ್ಯ ಕೆಲಸದ ನಿರ್ವಹಣೆ ಮತ್ತು ಅದಕ್ಕೆ ಪೂರಕ ಸಿಬ್ಬಂದಿಯನ್ನು ಒದಗಿಸುವ ಸಲುವಾಗಿ ತಾತ್ಕಾಲಿಕ ಬಡ್ತಿ (ಷರತ್ತುಗೊಳಪಟ್ಟಂತೆ ನಿಯಮ 32ರಲ್ಲಿ) ನೀಡಬಹುದಾದ ಸನ್ನಿವೇಶಗಳಲ್ಲಿ ಆಡಳಿತ ಮತ್ತು ಸಿಬ್ಬಂದಿ ಇಲಾಖೆಯಿಂದ ಯಾವುದಾದರೂ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆಯೇ; ಇದ್ದಲ್ಲಿ, ವಿವರವಾದ ಮಾಹಿತಿ ನೀಡುವುದು;

(ಇ) ರಾಜ್ಯದ ಯಾವುದೇ ಇಲಾಖೆಯವರು ಜ್ಯೇಷ್ಠತಾ ಪಟ್ಟಿಯಲ್ಲಿರುವ ಗೊಂದಲಗಳು ನ್ಯಾಯಾಲಯದಲ್ಲಿರುವ ಕಾರಣದಿಂದ ಅಗತ್ಯ ಕೆಲಸದ ನಿರ್ವಹಣೆ ಮತ್ತು ಅದಕ್ಕೆ ಪೂರಕ ಸಿಬ್ಬಂದಿಯನ್ನು ಒದಗಿಸುವ ಸಲುವಾಗಿ ತಾತ್ಕಾಲಿಕ ಬಡ್ತಿ (ಷರತ್ತುಗೊಳಪಟ್ಟಂತೆ ನಿಯಮ 32ರಲ್ಲಿ) ನೀಡುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗಬಹುದೇ? (ವಿವರ ನೀಡುವುದು)